ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 09.02.2023
ಪಾಟಿ ಸವಾಲು : 1 ನೇ ಪ್ರತಿವಾದಿ ಪರ ಶ್ರೀ ಎಂ.ಆರ್.ವಿ ವಕೀಲರಿಂದ

ವಾದಿ ಮತ್ತು 1 ನೇ ಪ್ರತಿವಾದಿ ನಮ್ಮ ಗ್ರಾಮದವರು ಅಲ್ಲ ಎಂದರೆ ಸರಿ. ನಾನು ಸಲ್ಲಿಸಿರುವ ಪ್ರಮಾಣ ಪತ್ರಿಕೆಯಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ವಾದಿ ಮತ್ತು ಪ್ರತಿವಾದಿಗಳು ನನಗೆ ಸುಮಾರು 10 ವರ್ಷಗಳಿಂದ ಪರಿಚಯ.

1 ನೇ ಪ್ರತಿವಾದಿಯ ಗಂಡನ ಹೆಸರು ಚೆನ್ನಬಸವಯ್ಯ. ವಾದಿಯ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇರುತ್ತದೆ ಆ ಕಾರಣದಿಂದ ಅವರು ನನಗೆ ಪರಿಚಯ. ವಾದಿಯ ಜಮೀನಿನ ಪೂರ್ವ ದಿಕ್ಕಿಗೆ ನನ್ನ ಜಮೀನು ಬರುತ್ತದೆ. ದಾವಾ ಸ್ವತ್ತಿನ 300 ಮೀಟರ್ ಅಂತರದಲ್ಲಿ ನನಗೆ ಸೇರಿದ ಜಮೀನು ಇರುತ್ತದೆ.

ದಾವಾ ಸ್ವತ್ತಿನ ಸ.ನಂ.626/4 ಆಗಿರುತ್ತದೆ. ದಾವಾ ಸ್ವತ್ತು alienation ಆಗಿ ಗ್ರಾಮಾ ಠಾಣಾ ಸ್ವತಾಗಿರುತ್ತದೆ. ದಾವಾ ಸ್ವತ್ತಿಗೆ ಸಂಬಂಧಿಸಿದ ಕ್ರಯ ಪತ್ರಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ನೋಡಿಲ್ಲ. ದಾವಾ ಸ್ವತ್ತುಗಳ ಚೆಕ್ಕು ಬಂದಿ ಹೇಳಬಲ್ಲೆ. ಎ ಷೆಡ್ಯೂಲ್?ವಿಸ್ತೀರ್ಣ ಹೇಳಲಾಗುವುದಿಲ್ಲ ಚೆಕುಬಂದಿ ಹೇಳಬಲ್ಲೆ. ಪೂರ್ವಃ ಮಲ್ಲಣ್ಣ ಜಮೀನು, ಪಶ್ಚಿಮಃ ಸುಬ್ಬಮ್ಮನವರ ಜಾಗ, ಉತ್ತರಃ ದೇವರಗುಡ್ಡನ ಬಸವೇಗೌಡರ ಜಾಗ, ದಕ್ಷಿಣಃ ಸಿದ್ದಯ್ಯನವರ ಜಾಗ ಇರುತ್ತದೆ.

ಬಿ ಷೆಡ್ಯೂಲ್?ವಿಸ್ತೀರ್ಣ ಹೇಳಲಾಗುವುದಿಲ್ಲ ಚೆಕುಬಂದಿ ಹೇಳಬಲ್ಲೆ. ಪೂರ್ವಃ ಸಿದ್ದೇಗೌಡರ ಜಾಗ, ಪಶ್ಚಿಮಃ ಮಂಡ್ಯ-ಬನ್ನೂರು ರಸ್ತೆ, ಉತ್ತರಃ ಸುಬ್ಬಮ್ಮನವರ ಜಾಗ, ದಕ್ಷಿಣಃ ಗಾಮನಹಳ್ಳಿ ರಸ್ತೆ ಇರುತ್ತದೆ.

ಗಾಮನಹಳ್ಳಿ ರಸ್ತೆಗೆ ಹೋಗುವ ಮುನ್ನ ಯಾವುದೇ ಮನೆಗಳು ಇಲ್ಲ ಅದು ಪಾಳು ಬಿದ್ದಿತ್ತು. ಪಾಳು ಬಿದ್ದ ಜಾಗ ಯಾರದು ಎಂದು ಗೊತ್ತಿಲ್ಲ. ಆ ಜಾಗ ಯಾರದು ಎಂದು ನಾನು ವಿಚಾರಣೆ ಮಾಡಿಲ್ಲ.

ನಾನು ನೋಡಿದ ಕ್ರಯ ಪತ್ರಗಳು ಯಾರು ಯಾರ ಹೆಸರಿಗೆ ಯಾವ ದಿನಾಂಕದಂದು ಮಾಡಲಾಗಿದೆ ಎಂದು ಗೊತ್ತಿಲ್ಲ. ಕ್ರಯ ಪತ್ರಗಳಲ್ಲಿ ನಮೂದಿಸಲಾಗಿರುವ ಚೆಕ್ಕು ಬಂದಿ ನನಗೆ ಗೊತ್ತಿಲ್ಲ.

ಈ ದಿನ ಸಾಕ್ಷ್ಯ ಹೇಳಲು ನ್ಯಾಯಾಲಯಕ್ಕೆ ವಾದಿ ಕರೆದುಕೊಂಡು ಬಂದಿದ್ದಾರೆ ಎಂದರೆ ಸುಳ್ಳು. ನ್ಯಾಯಾಲಯದಿಂದ ಸಾಕ್ಷ್ಯ ಹೇಳುವಂತೆ ನೋಟೀಸ್?ಬಂದಿರಲಿಲ್ಲ. ನಾನು ಊರಿನ ಯಾಜಮಾನನಲ್ಲ.

ನಾವು ಪಂಚಾಯಿತಿ ಸೇರಿದ ನಿರ್ದಿಷ್ಟ ದಿನಾಂಕ ಗೊತ್ತಿಲ್ಲ. ಪಂಚಾಯಿತಿಗೆ ನಾನು, ಪಿ.ಲಿಂಗಯ್ಯ, ಲೋಕೇಶ್, ಜಯರಾಂ ಇನ್ನೂ ಸುಮಾರು ಜನ ಸೇರಿದ್ದರು. ಪಂಚಾಯಿತಿಗೆ ನನ್ನನ್ನು ವಾದಿ ಕರೆದಿದ್ದರು. 1 ನೇ ಪ್ರತಿವಾದಿ ಕಡೆಯಿಂದ ಪಂಚಾಯಿತಿಗೆ ಯಾರು ಯಾರು ಬಂದಿದ್ದರು ಎಂದು ಹೇಳಲಾಗುವುದಿಲ್ಲ.

ನನ್ನ ತಂದೆ ಬದುಕಿದ್ದಾರೆ. ನಿಡಿ.1 ರಲ್ಲಿ ತೋರಿಸಿರುವ ಶೆಡ್?ವಾದಿಗೆ ಸೇರಿದ್ದು. ನಿಡಿ.2 ರಲ್ಲಿ ಕಾಣುವ ಮನೆ ಯಾರದ್ದು ಎಂದು ನನಗೆ ಗೊತ್ತಿಲ್ಲ. ನಿಡಿ.2 ರಲ್ಲಿ ಕಾಣುವ ಬೇಸ್ ಮೆಂಟ್?ಸುಬ್ಬಮ್ಮ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ಮಹದೇವು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಡಿ.2 ರಲ್ಲಿ ಕಾಣುವ ಬೇಸ್?ಮೆಂಟ್?ಮತ್ತು ಶೆಡ್ ಅನ್ನು 1 ನೇ ಪ್ರತಿವಾದಿ ಕಟ್ಟಿದ್ದು ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಯ ಗಂಡ ವಾದಿಯ ತಂದೆಯಿಂದ ಖರೀದಿ ಮಾಡಿದ ಆಸ್ತಿ ಎಂದರೆ ಸುಳ್ಳು.

ಶೆಡ್? ಮತ್ತು ಬೇಸ್? ಮೆಂಟ್? ಮಹದೇವು ಕಟ್ಟಿರುವ ಬಗ್ಗೆ ದಾಖಲಾತಿಗಳನ್ನು ನೋಡಿದ್ದೇನೆ. ಶೆಡ್ ಹಾಕಲಾಗಿರುವ ಜಾಗದ ಖಾತಾ ನಂಬರ್ ಮತ್ತು ಎಷ್ಟು ವಿಸ್ತೀರ್ಣದಲ್ಲಿ ಶೆಡ್?ನಿರ್ಮಿಸಲಾಗಿದೆ ಎಂದು ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿ ಗಂಡ 3 ಗುಂಟೆ ವಿಸ್ತೀರ್ಣದ ಸ್ವತನ್ನು ವಾದಿಯ ತಂದೆಯಿಂದ ಖರೀದಿ ಮಾಡಿರುವ ವಿಚಾರ ಗೊತ್ತು. 1 ನೇ ಪ್ರತಿವಾದಿಯ ಗಂಡ ಖರೀದಿ ಮಾಡಿದ ಜಾಗದಲ್ಲಿ ಏನು ಕಟ್ಟಿದ್ದಾರೆಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತಾನೇ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ಗಂಡ ಖರೀದಿಸಿರುವ ಆಸ್ತಿಯ ಚೆಕ್ಕು ಬಂದಿ ಹೇಳಬಲ್ಲೆ. ಪೂರ್ವಃ ವಾದಿಯ ಸ್ವತ್ತು, ಪಶ್ಚಿಮಃ ಬನ್ನೂರು-ಮಂಡ್ಯ ರಸ್ತೆ, ಉತ್ತರಃ ಕರೀಗೌಡರ ಸ್ವತ್ತು, ದಕ್ಷಿಣ ಃ ವಾದಿಯರಿಗೆ ಸೇರಿದ ಸ್ವತ್ತು ಇರುತ್ತದೆ.

ನಿಡಿ.1 ಮತ್ತು 2 ರಲ್ಲಿ ಕಾಣುವ ಶೆಡ್?ಮತ್ತು ಬೇಸ್ ಮೆಂಟ್ ಅನ್ನು 1 ನೇಪ್ರತಿವಾದಿ ನಿರ್ಮಾಣ ಮಾಡಿದ್ದಾರೆ ಎಂದರೆ ಸುಳ್ಳು. ನಿಡಿ.1 ಮತ್ತು 2 ರಲ್ಲಿ ಕಾಣುವ ಶೆಡ್ ಮತ್ತು ಬೇಸ್?ಮೆಂಟ್?ಅನ್ನು ಸುಬ್ಬಮ್ಮ ನಿರ್ಮಣ ಮಾಡಿದ್ದು ನನಗೆಗೊತ್ತಿದ್ದರೂ ಕೂಡ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಕೂಡ ಶೆಡ್?ಮತ್ತು ಬೇಸ್ ಮೆಂಟ್?ನಿರ್ಮಿಸಿರುವ ಜಾಗ 1 ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ ಎಂದರೆ ಸುಳ್ಳು. ವಾದಿಯೇ 1 ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದು 1 ನೇಪ್ರತಿವಾದಿ ಯಾವತ್ತೂ ವಾದಿಗೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು ಃ 2 ನೇ ಪ್ರತಿವಾದಿ ಪರ</u>**

2 ನೇ ಪ್ರತಿವಾದಿ ಗೈರು ಹಾಜರಾಗಿದ್ದು ಅವರ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.